215 (125) : ಶ್ರೀ ಅಶೋಕ್.ಆರ್ (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕಳೆದ 20 ವರ್ಷಗಳಲ್ಲಿ ಎಷ್ಟು ಖಾಸಗಿ ಕೋ-ಆಪರೇಟಿವ್ ಸೊಸೈಟಿಗಳಿಗೆ ಬಡಾವಣೆ ನಿರ್ಮಾಣ ಮಾಡಲು ನಕ್ಷೆ ಮಂಜೂರಾತಿ ಮಾಡಿದೆ; (ವಿವರಗಳನ್ನು ನೀಡುವುದು)

ಆ) ಈ ಸೊಸೈಟಿಗಳಲ್ಲಿ ಬರುವ ಎಷ್ಟು ಸಿ.ಎ. ಜಾಗವನ್ನು ಬಿ.ಡಿ.ಎ. ಪತಿಯಿಂದ ಮಾರಾಟ ಮಾಡಲಾಗಿದೆ; ಇದರಿಂದ ಬರಿದ ಹಣವೆಷ್ಟು;

ಇ) ಈ ಸೊಸೈಟಿಗಳಲ್ಲಿ ಅಕ್ರಮವಾಗಿ ಸಿ.ಎ. ಪಾರ್ಕ್ ಜಾಗಗಳನ್ನು ಮಾರಾಟ ಮಾಡಿರತಕ್ಕಂತಹ ಸೊಸೈಟಿಗಳಾವುವು; ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಳೆದ 20 ವರ್ಷಗಳಿಂದ ಒಟ್ಟು 184 ಖಾಸಗಿ ಬಡಾವಣೆ ನಕ್ಷೆಗಳನ್ನು ಅನುಮೋದಿಸಿದೆ (ಪಟ್ಟಿ ಲಗತ್ತಿಸಿದೆ).

ಆ) ಪ್ರಾಧಿಕಾರವು ಖಾಸಗಿ ಬಡಾವಣೆಯಲ್ಲಿ ಒಟ್ಟು 157 ನಾಗರೀಕ ಸೌಲಭ್ಯ ನಿವೇಶನಗಳನ್ನು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿದೆ. ಹಂಚಿಕೆ ನಿಯಮಾವಳಿಗಳ ಪ್ರಕಾರ ಮಾಡಲಾಗಿದೆ. ಹಂಚಿಕೆ ನಿಯಮಾವಳಿಗಳ ಪ್ರಕಾರ ಯಾವುದೇ ನಿವೇಶನಗಳನ್ನು ಮಾರಾಟ ಮಾಡುವುದಿಲ್ಲ. ಈ ಹಂಚಿಕೆಯಾಗಿರುವ ನಿವೇಶನಗಳಿಂದ ಒಟ್ಟು ಗುತ್ತಿಗೆ ಮೌಲ್ಯ ರೂ. 15,08,51,964-00 ಪ್ರಾಧಿಕಾರಕ್ಕೆ ಸಂದಾಯವಾಗಿರುತ್ತದೆ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಗಮನದಲ್ಲಿರುವಂತೆ ಅನಧಿಕೃತವಾಗಿ ಸಿ.ಎ. ಮತ್ತು ಉದ್ಯಾನವನ ನಿವೇಶನಗಳನ್ನು ಮಾರಾಟ ಮಾಡಿರುವ ಸಹಕಾರ ಸಂಘಗಳೆಂದರೆ:

ಅ) ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಂಘ (ಡಿ ಗ್ರೂಪ್)
ಆ) ಅಮರಜ್ಯೋತಿ ಗೃಹ ನಿರ್ಮಾಣ ಸಂಘ, ದೊಮ್ಮಲೂರು.
ಇ) ಎಸ್.ಜಿ.ಇ.ಎಂಪ್ಲಾಯೀಸ್ ಗೃಹ ನಿರ್ಮಾಣ ಸಂಘ, ಬೆನ್ನಿಗಾನಹಳ್ಳಿ.
ಈ) ಶ್ರೀ ವಿನಾಯಕ ಗೃಹ ನಿರ್ಮಾಣ ಸಂಘ, ನಾಗರಭಾವಿ.
ಉ) ಶ್ರೀ ಬಾಪೂಜಿ ಗೃಹ ನಿರ್ಮಾಣ ಸಂಘ, ಕೆ.ಸಿ. ಅಗ್ರಹಾರ
ಊ) ವೈಯಾಲಿಕಾವಲ್ ಗೃಹ ನಿರ್ಮಾಣ ಸಂಘ, ಕೆ.ಪಿ. ಅಗ್ರಹಾರ
ಋ) ಭವಾನಿ ಗೃಹ ನಿರ್ಮಾಣ ಸಂಘ, ಕತ್ರಿಗುಪ್ಪೆ.

216 (125) : ಶ್ರೀ ಅಶೋಕ್.ಆರ್ (ಉತ್ತರಹಳ್ಳಿ), ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮತ್ತು ಶ್ರೀ ಜಿ.ಸಿ. ಮೋಹನ್, ಎಂ.ಎಲ್.ಎ (ಚಿಕ್ಕಪೇಟೆ) ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಒಡೆತನದಲ್ಲಿರುವ ನಗರದ ಚಿತ್ರಮಂದಿರಗಳು ಎಷ್ಟು ಹಾಗು ಅವು ಯಾವುವು;

ಆ) ಇವುಗಳಲ್ಲಿ ಚಿತ್ರಪ್ರದರ್ಶನ ಯಾವ ರೀತಿ ನಡೆಯುತ್ತಿದೆ;

ಇ) ಇತ್ತೀಚೆಗೆ ಸದರಿ ಚಿತ್ರಮಂದಿರಗಳಲ್ಲೊಂದಾದ ಪುಟ್ಟಣ್ಣ ಚಿತ್ರಮಂದಿರವನ್ನು ಬೀಗಮುದ್ರೆಗೊಳಿಸಿ ಅದನ್ನು ಪೊಲೀಸ್ ಠಾಣೆ ಮಾಡಿರುವುದು ನಿಜವೇ;

ಈ) ಚಿತ್ರಮಂದಿರ ಮುಚ್ಚಲು ಕಾರಣಗಳೇನು;

ಉ) ಈ ಚಿತ್ರಮಂದಿರವನ್ನು ಪುನರಾರಂಭಗೊಳಿಸಲು ಸರ್ಕಾರ ಘೋಷಿಸಿರುವುದು ನಿಜವಲ್ಲವೆ;

ಊ) ಹಾಗಿದ್ದಲ್ಲಿ, ಈ ಚಿತ್ರಮಂದಿರವನ್ನು ಯಾವಾಗ ಪುನರಾರಂಭಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಸರ್ಕಾರಿ ಒಡೆತನದಲ್ಲಿ ಚಿತ್ರಮಂದಿರಗಳು ಯಾವುದು ಇರುವುದಿಲ್ಲ. ಆದರೆ, ಮಹಾತ್ಮಗಾಂಧಿ ರಸ್ತೆಯಲ್ಲಿ ಬಹು ಉಪಯೋಗಿ ಕಟ್ಟಡದಲ್ಲಿರುವ ಶಂಕರ್‌ನಾಗ್ ಚಿತ್ರಮಂದಿರ ಹಾಗೂ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಪುಟ್ಟಣ್ಣ ಚಿತ್ರಮಂದಿರಗಳು ಬೆಂಗಳೂರು ಮಹಾನಗರ ಪಾಲಿಕೆಯ ಒಡೆತನದಲ್ಲಿರುತ್ತವೆ.

ಆ) ಶಂಕರ್‌ನಾಗ್ ಚಿತ್ರಮಂದಿರದ ಪರವಾನಗಿಯನ್ನು ಖಾಸಗಿಯವರಿಗೆ ಗುತ್ತಿಗೆಗೆ ನೀಡಲಾಗಿದೆ. ಪುಟ್ಟಣ್ಣ ಚಿತ್ರಮಂದಿರವನ್ನು ಈ ಹಿಂದೆ ಕರ್ನಾಟಕ ಚಲನಚಿತ್ರ ಕೈಗಾರಿಕಾಭಿವೃದ್ಧಿ ನಿಗಮ ನಿಯಮಿತ ರವರು ನಡೆಸುತ್ತಿದ್ದು, ದಿನಾಂಕ 30.4.2004 ರಿಂದ ಪ್ರದರ್ಶನವನ್ನು ರದ್ದುಪಡಿಸಿ ಚಿತ್ರಮಂದಿರವನ್ನು ಪಾಲಿಕೆಗೆ ವಾಪಸ್ ನೀಡಲಾಗಿದೆ. ಸದ್ಯಕ್ಕೆ ಆ ಚಿತ್ರಮಂದಿರವು ಪಾಲಿಕೆಯ ವಶದಲ್ಲಿರುತ್ತದೆ.

ಇ) ಜಯನಗರ ಪೊಲೀಸ್ ಠಾಣೆಯನ್ನು ಆಧುನೀಕರಿಸುತ್ತಿರುವ ಹಿನ್ನೆಲೆಯಲ್ಲಿ ಪುಟ್ಟಣ್ಣ ಚಿತ್ರಮಂದಿರದಲ್ಲಿ ಪ್ರದರ್ಶನ ಇಲ್ಲದಿರುವುದರಿಂದ ಆ ಕಟ್ಟಡದ ಮಹಡಿ ಮತ್ತು ಒಂದು ಛೇಂಬರ್‌ನ್ನು ತಾತ್ಕಾಲಿಕವಾಗಿ ಪೊಲೀಸ್ ಠಾಣೆಯ ಉಪಯೋಗಕ್ಕೆ ನೀಡಲಾಗಿದೆ.

ಈ) ಪುಟ್ಟಣ್ಣ ಕಣಗಾಲ್ ಚಿತ್ರಮಂದಿರವನ್ನು ಹಿಂದೆ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿತ್ತು. ಸದರಿ ಸಂಸ್ಥೆಯು ದಿನಾಂಕ 30.4.2004 ರಿಂದ ಚಿತ್ರ ಪ್ರದರ್ಶನವನ್ನು ಸ್ಥಗಿತಗೊಳಿಸಿ ಕಟ್ಟಡವನ್ನು ಬೆಂಗಳೂರು ಮಹಾನಗರ ಪಾಲಿಕೆಯ ವಶಕ್ಕೆ ವಹಿಸಿಕೊಟ್ಟಿದೆ. ಈ ಚಿತ್ರಮಂದಿರವನ್ನು ರಿಪೇರಿ ಮಾಡುವ ಅಗತ್ಯವಿದ್ದು, ರಿಪೇರಿ ಕಾರ್ಯ ಕೈಗೊಳ್ಳಬೇಕಾಗಿದೆ. ಆದುದರಿಂದ, ಚಿತ್ರ ಪ್ರದರ್ಶನ ನಡೆಯುತ್ತಿಲ್ಲ.

ಉ) ಚಿತ್ರಮಂದಿರವನ್ನು ಆರ್.ಒ.ಎಂ.ಟಿ. (ರಿಪೇರಿ-ಆಪರೇಟ್-ಮೇಂಟೇನೆನ್ಸ್ ಅಂಡ್ ಟ್ರಾನ್ಸ್‌ಫರ್) ಆಧಾರದ ಮೇಲೆ ಬಹಿರಂಗ ಟೆಂಡರ್ ಮೂಲಕ ವಿಲೇವಾರಿ ಮಾಡಲು ಆಲೋಚಿಸಲಾಗಿದೆ.

ಊ) ಕೆಲವೊಂದು ಅಗತ್ಯ ತುರ್ತು ರಿಪೇರಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಈ ಬಗ್ಗೆ ಆರ್.ಒ.ಎಂ.ಟಿ. ಆಧಾರದ ಮೇಲೆ ಹರಾಜು ಮಾಡಿ ಗುತ್ತಿಗೆ ನೀಡುವ ಮೂಲಕ ಚಿತ್ರಮಂದಿರವಲ್ಲಿ ಪ್ರದರ್ಶನವನ್ನು ಪುನರಾರಂಭಿಸಲು ಕ್ರಮ ವಹಿಸಲಾಗುವುದು.